(SRI B. G BANAKAR)

(c) the names of Districts wherein even 25 per cent of the allotted loan is not distributed ;

(d) the names of taluks wherein 25 per cent of the allotted loan is not distributed to the cultivators ?

SRI N. CHIKKE GOWDA.—(Minister for Agriculture and Animal Husbandry)

(a) Only during Rabi/Summer 1972-73 a total sum of Rs. 200 akhs was allotted by the Central Government under E.A.P.P. for lpurchase and distribution of inputs like seeds, fertilisers and pest cides.

(b) This kind of loan was distributed oniy during Rabi/Summer 1972-73 and the total amount distributed is 196.92 lakhs.

(c) Nil.

(d) Shimoga, Soraba, Hosanagara, Thirthahally Kumta, Bhatkal Sirsi, Haliyal and Mundgod taluks.

ಭದ್ರಾವತಿ ಕಾಗದದ ಕಾರ್ಖಾನೆಯನ್ನು ಖಾಸಗಿ ಸಂಸ್ಥೆಗೆ ವಹಿಸುವುದು.

೪೯. ಶ್ರೀ ಬಿ. ಬೈರಪ್ಪಾಜಿ (ತುರುವೆಕೆರೆ).—ಕೈಗಾರಿಕಾ ಸಚಿವರು ಈ ವಿಷಯವನ್ನು ದಯೆ ಮಿಟ್ಟು ತಿಳಿಸುವರೆ.—

(ಅ) ಭದ್ರಾವತಿ ಕಾಗದದ ಕಾರ್ಖಾನೆಯನ್ನು ಖಾಸಗೀ ಸಂಸ್ಥೆಯೊಂದಕ್ಕೆ ವಹಿಸಿಕೊಡಲು ಸರ್ಕಾರ ಉದ್ದೇಶಿಸಿರುವುದು ನಿಜವೆ,

(ಆ) ಹಾಗಾದರೆ ಕಾರಣಗಳೇನು ?

ಶ್ರೀ ಎಸ್. ಎಂ. ಕೃಷ್ಣ.—ಕೈಗಾರಿಕೆ ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು.

ಉತ್ತರ.—(ಅ) ಇಲ್ಲ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಂತರ ಜಿಲ್ಲಾ ಆಹಾರ ಸಾಗಾಣಿಕೆ ನಿರ್ಬಂಧ ಮತ್ತು ಬೆಲೆಗಳ ಏರಿಕೆ.

೪೦. ಶ್ರೀ ಬಿ. ಬೈರಪ್ಪಾಜಿ (ತುರುವೆಕೆರೆ).—ಆಹಾರ ಮತ್ತು ಅರಣ್ಯ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೆ.

(ಅ) ರಾಜ್ಯದಲ್ಲಿ ಜಾರಿಯಲ್ಲಿರುವ ಅಂತರ ಜಿಲ್ಲಾ ಆಹಾರ ಸಾಗಾಣಿಕೆ ನಿರ್ಬಂಧದಿಂಡ ಆಹಾರ ಪದಾರ್ಥಗಳ ಬೆಲೆಗಳು ಹೆಚ್ಚುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೇ,

(ಆ) ಹಾಗಾದರೆ ಈ ನಿರ್ಬಂಧವನ್ನು ತೆಗೆದು ಹಾಕಲು ಸರಕಾರ ಪುನರಾ ಲೋಚಿಸುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್ —ಆಹಾರ ಮತ್ತು ಅರಣ್ಯ ಮಂತ್ರಿಗಳು.

ಉತ್ತರ.—(ಅ) ಇಲ್ಲ.

(ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಪ್ರತಿ ತಾಲ್ಲೂಕಿನಲ್ಲಿ ಮುನ್ಸೀಫ್ ಕೋರ್ಟ್ ಸ್ಥಾಪಿಸುವುದು.

೪೨. ಶ್ರೀ ಬಿ. ಬೈರಪ್ಪಾಜಿ (ತುರುವೆಕೆರೆ).—ಕಾನೂನು ಹಾಗೂ ಪೌರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ —

(ಅ) ಪ್ರತಿ ತಾಲ್ಲೂಕಿನಲ್ಲಿಯೂ ಇನ್ನು ಮುಂದೆ ಒಂದು ಮುನಸೀಫ್ ಕೋರ್ಟು ಸ್ಥಾಪಿಸಲು ಸರ್ಕಾರ ನಿರ್ಧರಿಸಿರುವುದೆ ;

(ಆ) ಹಾಗಿದ್ದಲ್ಲಿ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿಗೆ ಈ ವರ್ಷ ಕೋರ್ಟು ಮಂಜೂರು ಮಾಡಲು ಉದ್ದೇಶಿಸಿರುವುದೇ ?

ಶ್ರೀ ಡಿ. ಕೆ. ನಾಯ್ಕರ್ (ಕಾನೂನು ಹಾಗೂ ಪೌರಾಡಳಿತ ಮಂತ್ರಿಗಳು).—

(ಅ) ಅಂತಹ ಅಧಿಕೃತ ನಿರ್ಧಾರವನ್ನು ಸರ್ಕಾರ ಕೈಕೊಂಡಿಲ್ಲ.

(ಆ) ಇಲ್ಲ.

ಶ್ರವಣಬೆಳಗೊಳದ ದಿಗಂಬರ ಜೈನ ಮುಜರಾಯಿ ಸಂಸ್ಥೆಗಳ ಸಮಿತಿಗೆ ನಾಮಕರಣ.

*೪೫. ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿಸಿ).—ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಶ್ರವಣ ಬೆಳಗೊಳದಲ್ಲಿನ ದಿಗಂಬರ ಜೈನ ಮುಜರಾಯಿ ಸಂಸ್ಥೆಗಳ ಆಡಳಿತ ಸಮಿತಿಗೆ ಸರಕಾರ ನಾಮಕಣ ಮಾಡಿರುವ ಮಾಸ್ಯ ಸದಸ್ಯರುಗಳು ಯಾರು ;

(ಆ) ಈ ಆಡಳಿತ ಸಮಿತಿಯಲ್ಲಿ ಸರಕಾರದ ನೀತಿಗೆ ಅನುಗುಣವಾಗಿ ಪರಿಶಿಷ್ಟ ವರ್ಗ ಮತ್ತ ಪರಿಶಿಷ್ಟ ಜನಾಂಗದ ಪ್ರತಿನಿಧಿಯನ್ನು ನೇಮಕ ಮಾಡಲಾಗಿದೆಯೇ ;

(ಇ) ಹಾಗಿಲ್ಲದಿದ್ದರೆ ಸಮಿತಿಯಲ್ಲಿ ಓರ್ವ ಹರಿಜನ ಪ್ರತಿನಿಧಿಯನ್ನು ಸೇರಿಸಲು ಸರ್ಕಾರ ಕ್ರಮ ಕೈಕೊಳ್ಳುವುದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು).—(ಅ) ಸದಸ್ಯರುಗಳ ಪಟ್ಟಿಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

(ಆ) ಇಲ್ಲ.

(ಇ) ಶ್ರವಣ ಬೆಳಗೊಳದಲ್ಲಿನ ದಿಗಂಬರ ಜೈನ ಮುಜರಾಯಿ ಸಂಸ್ಥೆಗಳ ಆಡಳಿತವು ೧೯೬೨ನೇ ದಿಗಂಬರ ಜೈನ ಮುಜರಾಯಿ ಸಂಸ್ಥೆಗಳ ಆಡಳಿತ ನಿಯಮಾವಳಿ ಪ್ರಕಾರ ನಡೆಸಲಾಗುತ್ತದೆ. ಈ ನಿಯಮಾವಳಿಯ ಹೊನೇ ನಿಯಮದ ಪ್ರಕಾರ ಆಡಳಿತ ಸಮಿತಿ ಸದಸ್ಯರು ದಿಗಂಬರ ಜೈನಮತೀಯರೇ ಆಗಿರಬೇಕು. ಆದ್ದರಿಂದ ಪರಿಶಿಷ್ಟ ಜನಾಂಗದವರನ್ನು ಈ ಸಮಿತಿಯ ಸದಸ್ಯರನ್ನಾಗಿ ನೇಮಿಸಲು ಅವಕಾಶವಿರುವುದಿಲ್ಲ.

The Composition of the present committee of Management of Digambar Jain Mujarai Institutions at Sravanabelagola.

1. Swamiji of Jain Mutt, Sravanabelagola. *Chairman*
2. The President of the All India Digambar Jain Teertha Kshetra Committee. *Vice-Chairman*
3. Another Vice-Chairman to be elected by the 24 members. *Vice-Chairman*

MEMBERS

Sriyuths :

1. T. Chandranna, Post Box No. 49, Davanagere.
2. S. D. Nagaraju, Cloth Merchant, Sravanabelagola.
3. C. K. M. Chandraiah, Proprietor : New Chamundeswari Cafe' Srira pet, Mysore-1.